3

**ಕರ್ನಾಟಕ ವಿಧಾನ ಪರಿಷತ್ತು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವಿಜಯ್ ಸಿಂಗ್, ಸ್ಥಳೀಯ ಸಂಸ್ಥೆಗಳ ಕ್ಷೇತ್ರ ಇವರು**

**330A ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಯನ್ನು 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್‌ಗೆ ಹೆಚ್ಚಿಸಬೇಕೆನ್ನುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸಚಿವರ ಉತ್ತರ:-**

2019-20ನೇ ಸಾಲಿನಲ್ಲಿ, ಕರ್ನಾಟಕ ರಾಜ್ಯದಲ್ಲಿ 13.35 ಲಕ್ಷ ಹೆಕ್ಟೆರ್ ಪ್ರದೇಶದಲ್ಲಿ ತೊಗರಿ ಬಿತ್ತನೆಯಾಗಿದ್ದು, ಅಂದಾಜು 12.02 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ನಿರೀಕ್ಷೆ ಇದೆ. ಪ್ರಸ್ತುತ ರಾಜ್ಯದ ಪ್ರಮುಖ ಮಾರುಕಟ್ಟೆಗಳಲ್ಲಿ ತೊಗರಿ ಉತ್ಪನ್ನದ ಮಾದರಿ ಧಾರಣೆಯು ರೂ.3,344/- ರಿಂದ 5,059/- ಗಳವರೆಗೆ ಮಾರಾಟವಾಗುತ್ತಿದೆ.

ಕೇಂದ್ರ ಸರ್ಕಾರವು 2019-20ರ ಮುಂಗಾರು ಹಂಗಾಮಿಗೆ ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಉತ್ಪನ್ನಕ್ಕೆ ರೂ.5800/- ಪ್ರತಿ ಕ್ವಿಂಟಾಲಿಗೆ ಬೆಂಬಲ ಬೆಲೆ ಘೋಷಿಸಿದೆ. ಮಾರುಕಟ್ಟೆ ಧಾರಣೆ ಇದಕ್ಕಿಂತಲೂ ಕಡಿಮೆ ಇರುವ ಕಾರಣ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಸಲು ರಾಜ್ಯ ಸರ್ಕಾರದಿಂದ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದರನ್ವಯ ಕೇಂದ್ರ ಸರ್ಕಾರವು ದಿನಾಂಕ:17-12-2019ರ ಪತ್ರದಲ್ಲಿ, ಗರಿಷ್ಟ 1,82,875 ಮೆ.ಟನ್ ಖರೀದಿ ಪ್ರಮಾಣವನ್ನು ನಿಗಧಿಪಡಿಸಿ, ಖರೀದಿ ಸಂಸ್ಥೆಯಾದ ನ್ಯಾಫೆಡ್ ಮೂಲಕ ಖರೀದಿಸಲು ಅನುಮೋದನೆ ನೀಡಲಾಗಿರುತ್ತದೆ.

ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಬೆಲೆ ಸ್ಥಿರೀಕರಣದ ಸಚಿವ ಸಂಪುಟ ಉಪ ಸಮಿತಿಯು, ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಗರಿಷ್ಟ 1,82,875 ಮೆಟ್ರಿಕ್ ಟನ್ ಖರೀದಿ ಪ್ರಮಾಣವು, ರಾಜ್ಯದಲ್ಲಿನ ಉತ್ಪಾದನೆಯ ಶೇಕಡಾ 16 ರಷ್ಟು ಒಳಗೊಳ್ಳುವ ಅಂಶ ಹಾಗೂ ರೈತರ ಹಿತ ಕಾಪಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಪ್ರತಿ ಕ್ವಿಂಟಾಲಿಗೆ ರೂ.5800/-ರಂತೆ ನಿಗಧಿಪಡಿಸಿದ್ದು ಇದರ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ರೂ.300/-ರಂತೆ ಪ್ರೋತ್ಸಾಹಧನ ನೀಡಿ, ಪ್ರತಿ ರೈತರಿಂದ ಗರಿಷ್ಠ 10 ಕ್ವಿಂಟಾಲ್ ತೊಗರಿ ಖರೀದಿಗೆ ನಿರ್ಣಯ ಕೈಗೊಂಡಿದೆ.

ರಾಜ್ಯ ಸರ್ಕಾರದ ಆದೇಶ ಸಂಖ್ಯೆ:ಸಇ/228/ಎಂಆರ್‌ಇ/2019 ದಿನಾಂಕ:7-2-2020ರ ಆದೇಶದನ್ವಯ, ಪ್ರತಿ ರೈತರಿಂದ ಗರಿಷ್ಟ 10 ಕ್ವಿಂಟಾಲ್ ತೊಗರಿಯನ್ನು ಖರೀದಿಸುವ ಸಂಬಂಧ, ರೈತ ನೊಂದಣಿ ಪ್ರಕ್ರಿಯೆಯನ್ನು ದಿನಾಂಕ:25-2-2020 ರವರೆಗೆ ಹಾಗೂ ಖರೀದಿ ಪ್ರಕ್ರಿಯೆಯನ್ನು ದಿನಾಂಕ:15-3-2020ರವರೆಗೆ ವಿಸ್ತರಿಸಲಾಗಿರುತ್ತದೆ. ತೊಗರಿ ಬೆಳೆಯುವ ರಾಜ್ಯದ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ವಿಜಯಪುರ, ಕೊಪ್ಪಳ, ಬಾಗಲಕೋಟೆ, ಬೆಳಗಾವಿ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ, ಕೇಂದ್ರ ಸರ್ಕಾರದ ನ್ಯಾಫೆಡ್ ಸಂಸ್ಥೆಯು ರಾಜ್ಯ ಸರ್ಕಾರದ ಮಾರ್ಕ್‌ಫೆಡ್ ಹಾಗೂ ತೊಗರಿ ಅಭಿವೃದ್ಧಿ ಮಂಡಳಿಯ ಮೂಲಕ ಖರೀದಿ ಪ್ರಕ್ರಿಯೆ ಜಾರಿಯಲ್ಲಿದೆ.

ದಿನಾಂಕ:18-2-2020ರ ಅಂತ್ಯಕ್ಕೆ, ಒಟ್ಟು 3,00,111 ರೈತರು ಖರೀದಿ ಸಂಸ್ಥೆಯೊಂದಿಗೆ ನೋಂದಣಿ ಮಾಡಿಕೊಂಡಿರುತ್ತಾರೆ ಮತ್ತು 3,45,106 ಕ್ವಿಂಟಾಲ್ ತೊಗರಿಯನ್ನು ಒಟ್ಟು 39,091 ರೈತರಿಂದ ಖರೀದಿಸಲಾಗಿರುತ್ತದೆ.

ರಾಜ್ಯದಲ್ಲಿ ರೈತರು ತೊಗರಿಯನ್ನು ಹೆಚ್ಚಾಗಿ ಬೆಳೆದ ಕಾರಣ, ಪ್ರತಿ ರೈತರಿಂದ 25 ಕ್ವಿಂಟಾಲ್ ತೊಗರಿಯನ್ನು ಖರೀದಿಸಲು ಅನುಮತಿ ನೀಡುವಂತೆ ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ : 31/01/2020 ಕೇಂದ್ರ ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ ಸಚಿವರನ್ನು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಕೇಂದ್ರ ಸರ್ಕಾರದ ಕೃಷಿ ಮತ್ತು ಸಹಕಾರ ಇಲಾಖೆಯ ಕಾರ್ಯದರ್ಶಿಯವರನ್ನು ದಿನಾಂಕ : 04/02/2020ರಂದು ಕೋರಿರುತ್ತಾರೆ.

ಬೀದರ್ ಜಿಲ್ಲೆಯಲ್ಲಿ 5 ತಾಲ್ಲೂಕುಗಳಿದ್ದು, ಬೀದರ್ ಜಿಲ್ಲಾಧಿಕಾರಿಗಳು ದಿನಾಂಕ : 23/12/2019 ಹಾಗೂ 07/01/2020ರಂದು ಒಟ್ಟು 106 ಖರೀದಿ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿ ನೀಡಿರುತ್ತಾರೆ. ಇದರನ್ವಯ 106 ಖರೀದಿ ಕೇಂದ್ರಗಳಲ್ಲಿ ದಿನಾಂಕ : 18/02/2020ರ ಅಂತ್ಯಕ್ಕೆ 47,419 ರೈತರು ನೋಂದಣಿಯಾಗಿದೆ. ಇವರಲ್ಲಿ 9,579 ರೈತರಿಂದ 66,741 ಕ್ವಿಂಟಾಲ್ ತೊಗರಿಯನ್ನು ಈಗಾಗಲೇ ಖರೀದಿಸಲಾಗಿರುತ್ತದೆ.

ಬೀದರ್ ಜಿಲ್ಲಾಧಿಕಾರಿಗಳು ದಿನಾಂಕ : 27/01/2020 ರಂದು 9 ಹಾಗೂ ದಿನಾಂಕ : 28/01/2020ರಂದು 2 ಖರೀದಿ ಕೇಂದ್ರಗಳು ಸೇರಿ ಒಟ್ಟು 11 ಖರೀದಿ ಕೇಂದ್ರಗಳನ್ನು PKPS ಗಳಲ್ಲಿ ಖರೀದಿಸಲು ಆದೇಶ ನೀಡಿರುತ್ತಾರೆ. ಆದರೆ, ಈಗಾಗಲೇ 106 ಖರೀದಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವ ಹಿನ್ನಲೆಯಲ್ಲಿ ಹೊಸ ಕೇಂದ್ರಗಳನ್ನು ಪ್ರಾರಂಭಿಸಲು NAFED ಇವರು ಸಹಮತಿ ನೀಡಿರುವುದಿಲ್ಲ. ಆದರೂ ಸಹ ಪರಿಸ್ಥಿತಿಯನ್ನು ಅವಲೋಕಿಸಿ ಅವಶ್ಯಕತೆಯಿದ್ದಲ್ಲಿ 11 ಖರೀದಿ ಕೇಂದ್ರಗಳಲ್ಲಿ ರೈತರಿಂದ ತೊಗರಿ ಖರೀದಿಸಲು ಬೀದರ್ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗುವುದು.

ರೈತರ ಸಹಕಾರದೊಂದಿಗೆ ಈಗಾಗಲೇ ಆದೇಶಿಸಿರುವಂತೆ ಪೂರ್ಣ ಪ್ರಮಾಣದ ತೊಗರಿಯನ್ನು ಖರೀದಿಸಲು ಕ್ರಮವಿಡಲಾಗುತ್ತದೆ.

ದಿನಾಂಕ : 18/02/2020

(ಸಹಿ)
ಸಹಕಾರ ಸಚಿವರು

ಕಡತ ಸಂಖ್ಯೆ : ಸಇ 97 ಎಂಆರ್ಇ 2020